

# ಮಾರುತಕ್ಕೂ ಧೃತಿಗೆಡದ ವೃಕ್ಷಸಂಕುಲ!



ನ್ಯೂಜಿಲೆಂಡ್‌ನ ದಕ್ಷಿಣದ ವಿಂಡ್ಸ್ ವೆಪ್ಟ್ ದ್ವೀಪದಲ್ಲಿ ಕಂಡುಬರುವ ಒಂದು ವಿಚಿತ್ರ ನೋಟವಿದು. ಆ ದ್ವೀಪದಲ್ಲಿ ಮನುಷ್ಯರು ವಾಸಿಸುವುದಿಲ್ಲ. ಪ್ರಾಣಿ ಪಕ್ಷಿಗಳಿಲ್ಲ. ಕುರಿಗಳು ಬೇರೆಡೆಯಿಂದ ಹುಲ್ಲು ಮೇಯಲು ಬರುತ್ತವೆ. ಇದು ಯಾಕೆ ನಿರ್ಮಾನುಷವಾಗಿದೆಯೆಂದರೆ ಇಲ್ಲಿ ಬೀಸುವ ಪ್ರಬಲವಾದ ನೈಋತ್ಯ ಮಾರುತ. ದಕ್ಷಿಣ ಧ್ರುವದಿಂದ 2984 ಮೈಲು ದೂರದಲ್ಲಿರುವ ಇಲ್ಲಿಗೆ ಬೀಸಿ ಬಂದು ಅಪ್ಪಳಿಸುವ ಗಾಳಿ ತಾಸಿಗೆ ಎರಡು ಸಾವಿರ ಮೈಲು ವೇಗದಲ್ಲಿರುತ್ತದೆ. ಹೀಗಾಗಿ ಮನುಷ್ಯರು, ಪ್ರಾಣಿಗಳು ಅದರ ಹೊಡೆತವನ್ನು ಎದುರಿಸಲು ಸಾಧ್ಯವಿಲ್ಲ.

ಆದರೆ ಇಲ್ಲೊಂದು ವಿಸ್ಮಯವಿದೆ. ಒಂದೆಡೆ ಇರುವ ಮರಗಳ ಸಮೂಹ ತೀವ್ರವಾದ ಗಾಳಿಗೂ ಬುಡ ಮೇಲಾಗದೆ, ಮುರಿಯದೆ ಉಳಿದುಕೊಂಡಿದೆ. ಗಾಳಿ ಅದನ್ನು ತಿರುಚಿದ್ದರೂ ಧೃತಿಗೆಡದೆ ಬದುಕಿಕೊಂಡಿದೆ. ಈ ಮರಗಳ ಗಟ್ಟಿತನ ನೋಡಿ ಹೋಗಲು ಮಾರುತಗಳು ತಗ್ಗಿರುವಾಗ ಪ್ರವಾಸಿಗರು ಬಂದು ಹೋಗುತ್ತಾರೆ.

■ ಪ. ರಾಮಕೃಷ್ಣ ಶಾಸ್ತ್ರಿ